ಸುದ್ದಿ ಸಿಂಚನ

ಇಂದಿನಿಂದ ತಂಬಾಕು ಹರಾಜು ಮಾರುಕಟ್ಟೆ

ಬೆಟ್ಟದಪುರ : ಪಿರಿಯಾಪಟ್ಟಣ ತಾಲೂಕಿನ ಕಗ್ಗುಂಡಿ ಗ್ರಾಮದ ತಂಬಾಕು ಮಂಡಳಿಯ ತಂಬಾಕು ಹರಾಜು ಮಾರುಕಟ್ಟೆಯು ಅ. 23ರಿಂದ ಪ್ರಾರಂಭವಾಗಲಿದೆ ಎಂದು ತಂಬಾಕು ಮಂಡಳಿಯ ಪ್ಲಾಟ್ ಫಾರಂ 6ರ ಹರಾಜು ಅಧೀಕ್ಷಕ ಧನರಾಜ್ ತಿಳಿಸಿದ್ದಾರೆ. 2026-27ನೇ ಸಾಲಿನ ತಂಬಾಕು ಬೆಳೆಗಾರರು ತಂಬಾಕು ವಿಂಗಡಣೆ ಮಾಡಿ ಗುಣಮಟ್ಟದ ಬೆಳೆಗಳನ್ನು ತರಬೇಕು, ತಂಬಾಕು ಹರಾಜು ಸಾಂಕೇತಿಕವಾಗಿ 18 ತಂಬಾಕು ಬೇಲ್ ಗಳನ್ನು ಶನಿವಾರದಿಂದ ಬೇಲ್ ಗಳಿಗೆ ನಿರ್ಬಂಧ ವಿರುವುದಿಲ್ಲ, ಹೆಚ್ಚು ಬೇಲ್ ಗಳನ್ನು ರೈತರು ತಂದರೆ ಕ್ಲಸ್ಟರ್‌ಮಾಡುತ್ತೇವೆ, ಈ ಬಾರಿ ತಂಬಾಕು ಗುಣಮಟ್ಟದ ಮೇಲೆ ಹರಾಜು ಮಾರುಕಟ್ಟೆ ನಡೆಯುವುದರಿಂದ ತಂಬಾಕು ಬೆಳೆಗಾರರು ತಂಬಾಕನ್ನು ಉತ್ತಮ, ಮಧ್ಯಮ, ಕೆಳ ದರ್ಜೆಯ ತಂಬಾಕನ್ನು ವಿಂಗಡಣೆ ಮಾಡಿ ಮಾರುಕಟ್ಟೆಗೆ ತರುವಂತೆ ಅವರು ಮನವಿ ಮಾಡಿದರು.

ದಕ್ಷಿಣಾಮೂರ್ತಿ ನಿಧನ

ಮೈಸೂರು: ಮಾಜಿ ಮೇಯರ್‌ಹಾಗೂ ಹಿರಿಯ ಕಾಂಗ್ರೆಸ್ ಮುಖಂಡ ದಕ್ಷಿಣಾಮೂರ್ತಿ (89) ಅವರು ಮಂಗಳವಾರ ನಿಧನರಾದರು.



ಬಂಡೀಕೇರಿ ನಿವಾಸಿಯಾದ ಅವರು, ಈಗ ಎನ್.ಆರ್. ಮೊಹಲ್ಲಾದ ಕೆಸರೆಯಲ್ಲಿ ನೆಲೆಸಿದ್ದರು. ಮೃತರು ಪತ್ನಿ, ಪುತ್ರ ಹಾಗೂ ಅಪಾರ ಬಂಧು, ಮಿತ್ರರನ್ನು ಹೊಂದಿದ್ದರು. ಎರಡು ಬಾರಿ ನಗರ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿದ್ದ ಅವರು 2005-06ನೇ ಅವಧಿಯಲ್ಲಿ ಮೈಸೂರು ಮೇಯರ್‌ಆಗಿದ್ದರು.

ಮತ್ತೆ ಕಾಡಿಗೆ ಮರಳಿದ ದಸರಾ ಗಜಪಡೆ...

ಪ್ರತ್ಯೇಕ ಲಾರಿಗಳಲ್ಲಿ 13 ಆನೆಗಳು ಕಾಡಿಗೆ ವಾಪಸ್ | ಮಾವುತರು, ಕಾವಾಡಿಗಳ ಕುಟುಂಬದವರು ಹಾಡಿಗೆ

• **ಬಿ. ಶೇಖರ್ ಗೋಪಿನಾಥಂ**
ಕನ್ನಡಪ್ರಭ ವಾರ್ತೆ ಮೈಸೂರು

ಕಾಡಿನಿಂದ ನಾಡಿಗೆ ಆಗಮಿಸಿ ನಾಡಹಬ್ಬ ಮೈಸೂರು ದಸರಾ ಜಂಬೂಸವಾರಿ ಯಶಸ್ವಿಗೊಳಿಸಿದ ಗಜಪಡೆಯು ಗುರುವಾರ ನಾಡಿನಿಂದ ಕಾಡಿಗೆ ಲಾರಿಗಳ ಮೂಲಕ ಮರಳಿದವು. ಇದರೊಂದಿಗೆ ದಸರಾ ಗಜ ಪಯಣ ಆರಂಭದಿಂದ ಇಲ್ಲಿಯವರೆಗೆ 58 ದಿನಗಳ ಆನೆಗಳ ದಸರಾ ಪಯಣ ಅಂತ್ಯವಾಯಿತು.

2026ನೇ ಸಾಲಿನ ದಸರೆಗಾಗಿ ಕಾಡಿನಿಂದ ನಾಡಿಗೆ 13 ಆನೆಗಳು ಆಗಮಿಸಿದ್ದವು. ಪ್ರತಿನಿತ್ಯ ವಿವಿಧ ತಾಲೀಮು ನಡೆಸಿ ದಸರಾ ಜಂಬೂಸವಾರಿಯಲ್ಲಿ ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದವು.

ಪ್ರಶಾಂತ ಆನೆ ಮೊದಲ ಬಾರಿಗೆ ಅಂಬಾರಿ ಹೊತ್ತು ಸೈ ಎನಿಸಿಕೊಂಡಿತು. ಇದರ ಅಕ್ಕಪಕ್ಕದಲ್ಲಿ ಕುಮ್ಕಿ ಆನೆಗಳಾಗಿ ಕಾವೇರಿ ಮತ್ತು ರೂಪಾ ಸಾಗಿದವು. ನಿಶಾನೆ ಆನೆಯಾಗಿ ಅಭಿಮನ್ಯು ಸಾಗುವ ಮೂಲಕ ಅಭಿಮಾನಿಗಳ ಆಸೆ ಈಡೇರಿಸಿತ್ತು. ನೌಫತ್ ಆನೆ ಗೋಪಿ, ಸಾಲಾನೆಗಳಾಗಿ ಮಹೇಂದ್ರ, ಲಕ್ಷ್ಮೀ, ಶ್ರೀರಾಮ, ಚೈತ್ರಾ, ಸುಗ್ರೀವ, ಶ್ರೀಕಂಠ ಮತ್ತು ಏಕಲವ್ಯ ಆನೆಗಳು ಸಾಗಿ ತಮ್ಮ ಕರ್ತವ್ಯ ಯಶಸ್ವಿಯಾಗಿ ನಿರ್ವಹಿಸಿದ್ದವು. ಮೀಸಲು ಅಂಬಾರಿ ಆನೆಯಾಗಿ ಆಯ್ಕೆಯಾಗಿದ್ದ ಧನಂಜಯ ಮಾತ್ರ ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳದೇ ಅರಮನೆ ಆನೆ ಬಿಡಾರದಲ್ಲಿ ಉಳಿದಿತ್ತು.

ದಸರಾ ಮುಗಿದ ಮಾರನೇ ದಿನವೇ 13 ಆನೆಗಳು ಪ್ರತ್ಯೇಕವಾಗಿ 13 ಲಾರಿಗಳಲ್ಲಿ ಏರಿ ತಮ್ಮ ತಮ್ಮ ಆನೆ ಶಿಬಿರಗಳಿಗೆ ಮರಳಿದವು. ಆನೆಗಳೊಂದಿಗೆ ಬಂದಿದ್ದ ಮಾವುತರು, ಕಾವಾಡಿಗಳು ಮತ್ತು ಅವರ ಕುಟುಂಬದವರು ಸಹ ಲಾರಿಗಳಲ್ಲಿ ಗೃಹೋಪಯೋಗಿ ವಸ್ತುಗಳನ್ನು ಲಾರಿಗಳಲ್ಲಿ ಮತ್ತು ಕ್ಯಾಬಿನ್ ಮೇಲೆ ತುಂಬಿಕೊಂಡು ಹಾಡಿಗೆ ತೆರಳಿದರು. ಬಹುತೇಕರಲ್ಲಿ ತಮ್ಮ ಹಾಡಿ ಗಳಲ್ಲಿರುವ ಮನೆಗಳಿಗೆ ವಾಪಸ್ ಹೋಗುತ್ತಿರುವ ಖುಷಿಯಲ್ಲಿದ್ದರು.



ಮೊದಲ ಬಾರಿಗೆ 750 ಕೆ.ಜಿ. ಚಿನ್ನದ ಅಂಬಾರಿಯನ್ನು ಯಶಸ್ವಿಯಾಗಿ ಹೊತ್ತ ಪ್ರಶಾಂತ ಆನೆಗೆ ಮಾವುತ ಚಿನ್ನಪ್ಪ ಸಿಹಿಮುತ್ತು.



ಲಾರಿಗಳಲ್ಲಿ ಕಾಡಿನತ್ತ ಪ್ರಯಾಣಿಸುತ್ತಿರುವ ದಸರಾ ಆನೆಗಳು. ಚಿತ್ರ - ಅನುರಾಗ್ ಬಸವರಾಜ್



ಅಂಬಾರಿ ಆನೆ ಪ್ರಶಾಂತ ಜಳಕ.

ಸಲೀಸಾಗಿ ಲಾರಿ ಹತ್ತಿದ ಆನೆಗಳು

ಈ ಬಾರಿ ಲಾರಿ ಹತ್ತಲು ಯಾವ ಆನೆಗಳು ಹಿಂದೇಟು ಹಾಕಲಿಲ್ಲ. ಎಲ್ಲಾ ಆನೆಗಳು ಸಲೀ ಸಾಗಿ ಲಾರಿ ಹತ್ತುವ ಮೂಲಕ ಗಮನ ಸೆಳೆ ದವು. ಅರಣ್ಯ ಇಲಾಖೆಯ ಸಿಬ್ಬಂದಿ, ಮಾವು ತರು ಮತ್ತು ಕಾವಾಡಿಗಳು ಸೇರಿ ಲಾರಿಗಳಲ್ಲಿ ಆನೆಗಳನ್ನು ಹತ್ತಿಸಿದರು. ಅರಮನೆ ಆನೆ ಬಿಡಾರದಲ್ಲಿರುವ ಮಣ್ಣಿನ ದಿಣ್ಣೆಯ ಬಳಿ ಆನೆಗಳನ್ನು ಲಾರಿಗೆ ಹತ್ತಿಸಲಾಯಿತು. ಕೆಲವು ಆನೆ ಅರಮನೆ ಕಟ್ಟೆ ಮೇಲಿಂದ ನಿರಾಶದಾಯಕ ವಾಗಿ ಲಾರಿ ಹತ್ತಿದವು.

ನಾಡಹಬ್ಬ ಮೈಸೂರು ದಸರಾ ಯಶಸ್ವಿಯಾಗಿ ಮುಗಿದಿದೆ. ಪ್ರಶಾಂತ ಆನೆ ಯಶಸ್ಸಿಗೆ ಕಾರಣವಾಗಿದ್ದಾನೆ. ಎಲ್ಲಾ ಆನೆಗಳ ಆರೋಗ್ಯ ಚೆನ್ನಾಗಿದೆ. ಎಲ್ಲಾ ಆನೆಗಳ ಹೆಲ್ತ್ ಮೇಂಟೈನ್ ಮಾಡಿದ್ದೀವಿ. ಪ್ರಶಾಂತ ಆನೆ ಸೌಮ್ಯ ಸ್ವಭಾವದ ಆನೆ. ಪ್ರಶಾಂತನಿಗೆ ಉತ್ತಮ ತರಬೇತಿ ನೀಡಲಾಗಿತ್ತು. ದಸರಾ ಯಶಸ್ಸಿಗೆ ಶ್ರಮಿಸಿದವರೆಲ್ಲರಿಗೂ ಕೃತಜ್ಞತೆಗಳು.
• **ಡಾ.ಪ್ರಭುಗೌಡ** ಡಿಸಿಎಫ್

ವಿವಿಧ ಶಿಬಿರಗಳತ್ತ ಗಜಪಡೆ: ದುಬಾರೆ ಆನೆ ಶಿಬಿರಕ್ಕೆ ಪ್ರಶಾಂತ, ಧನಂಜಯ, ಗೋಪಿ, ಶ್ರೀರಾಮ, ಸುಗ್ರೀವ, ಕಾವೇರಿ ಆನೆಗಳು ತೆರಳಿದವು. ಅಭಿಮನ್ಯು ಮತ್ತು ಶ್ರೀಕಂಠ ಮತ್ತಿಗೋಡು ಆನೆ ಶಿಬಿರ, ಮಹೇಂದ್ರ ಮತ್ತು ಲಕ್ಷ್ಮಿ ಬಳ್ಳೆ ಆನೆ ಶಿಬಿರ, ಏಕಲವ್ಯ ಮತ್ತು ರೂಪಾ ಭೀಮನಕಟ್ಟೆ ಆನೆ ಶಿಬಿರಕ್ಕೆ ತೆರಳಿತು. ಚೈತ್ರಾ ಆನೆಯು ಏಕಾಂಗಿಯಾಗಿ ರಾಮಪುರ ಆನೆ ಶಿಬಿರಕ್ಕೆತೆರಳಿತು. ಕಾಡಿಗೆತೆರಳುವಮುನ್ನಮೈಸೂರು ಅರಮನೆ ಜಯಮಾರ್ತಾಂಡ ದ್ವಾರದ ಮುಂಭಾಗ ದಲ್ಲಿ ಎಲ್ಲಾ 13 ಆನೆಗಳಿಗೆ ವಿಶೇಷ ಪೂಜೆ ಸಲ್ಲಿಸಿ ಬೀಳ್ಕೊಡಲಾಯಿತು. ನಂತರ ಲಾರಿಗಳನ್ನು ಏರಿದ ಆನೆಗಳು ಮಧ್ಯಾಹ್ನಮೈಸೂರಿನಿಂದ ಹೊರಟು ರಾತ್ರಿಯ ವೇಳೆಗೆ ತಮ್ಮ ತಮ್ಮ ಆನೆ ಶಿಬಿರವನ್ನು ಸೇರಿಕೊಂಡಿವೆ.

ಬಾಲಕಿ ಆರೋಗ್ಯ ವಿಚಾರಿಸಿ, ಸಹಾಯಹಸ್ತ ಚಾಚಿದ ಸಚಿವ ಡಾ.ಯತೀಂದ್ರ

ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕ್ಕೆ ಸೂಚನೆ | ಪೊಲೀಸ್ ಸಿಬ್ಬಂದಿಯ ಲಾರಿ ಬೀಸುವಿಕೆಯಿಂದ ಗಂಭೀರ ಗಾಯಗೊಂಡ ಮಗು

• **ಕನ್ನಡಪ್ರಭ ವಾರ್ತೆ** ಮೈಸೂರು

ದಸರಾ ಮೆರವಣಿಗೆಯನ್ನು ವೀಕ್ಷಿಸಲು ಆಗಮಿಸಿದ್ದ ವೇಳೆ ಪೊಲೀಸ್ ಸಿಬ್ಬಂದಿಯ ಲಾರಿ ಬೀಸುವಿಕೆಯಿಂದ ಗಂಭೀರ ಗಾಯಗೊಂಡು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬನ್ನಿಮಂಟಪದ ನಿವಾಸಿಗಳಾದ ನಾಗರಾಜು ಹಾಗೂ ಸೌಮ್ಯ ದಂಪತಿಯ ಪುತ್ರಿ ಶಿಶಿರಾ ಅವರನ್ನು ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಗುರುವಾರ ಆಸ್ಪತ್ರೆಗೆ ಖುದ್ದು ಭೇಟಿ ನೀಡಿ ಯೋಗಕ್ಷೇಮ ವಿಚಾರಿಸಿದರು.

ಈ ದುರ್ಘಟನೆಯಿಂದ ಆತಂಕಕ್ಕೊಳಗಾದ ಪೋಷಕರು ಹಾಗೂ ಕುಟುಂಬಸ್ಥರಿಗೆ ಸಚಿವರು ಸಾಂತ್ವನ ಹೇಳಿ, ಧೈರ್ಯ ತುಂಬಿದರು. ಮಗುವಿನ ಆರೋಗ್ಯ ಸ್ಥಿತಿ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದುಕೊಂಡ ಅವರು, ಮಗು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸಿದರು. ಅಲ್ಲದೆ, ಮಗುವಿನ ಚಿಕಿತ್ಸೆಗೆ ಅಗತ್ಯವಿರುವ ಎಲ್ಲಾ ರೀತಿಯ ಅತ್ಯುತ್ತಮ ವೈದ್ಯಕೀಯ ನೆರವನ್ನು ಒದಗಿಸುವುದಾಗಿ ಭರವಸೆ ನೀಡಿದ ಸಚಿವರು, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 5 ಲಕ್ಷ ರೂ. ಆರ್ಥಿಕ ಸಹಾಯ ದೊರೆಯುವಂತೆ ಕ್ರಮ ವಹಿಸುವುದಾಗಿ ಹಾಗೂ ವೈಯಕ್ತಿಕವಾಗಿಯೂ ಧನಸಹಾಯ ಮಾಡಿದರು.

ಸಾರ್ವಜನಿಕರ ರಕ್ಷಣೆಗೆ ಮತ್ತು ಸುವ್ಯವಸ್ಥೆ ಕಾಪಾಡಲು ಇರಬೇಕಾದ ಪೊಲೀಸರಿಂದ ಇಂತಹ ದುರದೃಷ್ಟಕರ ಘಟನೆಗಳು ಸಂಭವಿಸಿರುವುದು ಅತ್ಯಂತ ನೋವಿನ ಸಂಗತಿ. ಈ ಘಟನೆಗೆಕಾರಣರಾದಪೊಲೀಸ್ ಸಿಬ್ಬಂದಿಯ ವಿರುದ್ಧ ಕೂಡಲೇ ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರ ಮೇಲೆ ಕಠಿಣ ಕಾನೂನುಬದ್ಧ ಕ್ರಮ ಕೈಗೊಳ್ಳುವಂತೆ ಹಾಗೂ ಮುಂದಿನ ದಿನಗಳಲ್ಲಿ ಇಂತಹ ಅಚಾತುರ್ಯಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ಆಯುಕ್ತರಿಗೆ ಸಚಿವರು ಸೂಚಿಸಿದರು. ಈ ವೇಳೆ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ,ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್‌ಮೊದಲಾದವರು ಇದ್ದರು.



ಜಟ್ಟಿ ಕಾಳಗ ರದ್ದಾಗಲು ಅರಮನೆ ಎಸಿಪಿ ವಿಳಂಬ ಮಾಡಿದ್ದೆ ಕಾರಣ: ಜಟ್ಟಿಗಳು

ಮೈಸೂರು: ಈ ಬಾರಿ ಅರಮನೆಯಲ್ಲಿ ಜಟ್ಟಿ ಕಾಳಗ ನಡೆಯದೇ ಹೋದುದರ ಹಿಂದೆ ಜಟ್ಟಿಗಳ ತಪ್ಪೇನಿಲ್ಲ, ಬದಲಾಗಿ ಅರಮನೆ ಎಸಿಪಿ ಸಹಕರಿಸದೇ ವಿಳಂಬವಾಗಿ ಅರಮನೆ ಪ್ರವೇಶಿಸುವಂತೆ ಮಾಡಿದುದೇ ಕಾರಣ ಎಂದು ಜಟ್ಟಿಗಳು ಅಳಲು ತೋಡಿಕೊಂಡರು.

ಕಾಳಗದಲ್ಲಿ ಪಾಲ್ಗೊಳ್ಳುವ ಜಟ್ಟಿಗಳೆಲ್ಲ ಬೆಳಗ್ಗೆ 8ರ ಮುನ್ನವೇ ಅರಮನೆ ಪ್ರವೇಶಿಸಿ, ಸ್ಥಳಕ್ಕೆ ಆಗಮಿಸಬೇಕೆಂದು ಸೂಚಿಸಿ ತಮಗೆಲ್ಲ ಪಾಸ್ ನೀಡಲಾಗಿತ್ತು. ಆದರಂತೆ ಬೆಳಗ್ಗೆ 8ಕ್ಕೆ ಅರಮನೆಯ ಕರಿಕಲ್ ತೊಟ್ಟಿ ಬಳಿ ಹಾಜರಾದಾಗ ಪೊಲೀಸರು ತಕರಾರು ಮಾಡಿದರು. ಸ್ಕ್ಯಾನ್ ಮಾಡುವ ಯಂತ್ರ ಬಂದಿಲ್ಲ, ಆದರಲ್ಲಿ 9.30ಕ್ಕೆ ಸ್ಕ್ಯಾನ್ ಮಾಡಿ ಎಂದಿದೆ ಎಂದು ಕಾರಣ ನೀಡಿದರು. ಆಗ ನಾವು ಕಾಳಗದಲ್ಲಿ ಪಾಲ್ಗೊಳ್ಳುವ ಜಟ್ಟಿ ಗಳಾಗಿದ್ದೇವೆ, ಮುಹೂರ್ತದ ಸಮಯಕ್ಕೆ ಸರಿಯಾಗಿ ಅಲ್ಲಿರಬೇಕೆಂದು ಪರಿಪರಿಯಾಗಿ ಕೇಳಿಕೊಂಡರೂ ಬಿಡಲಿಲ್ಲ ಎಂದು ಬಾಲಾಜಿ ಜಟ್ಟಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು. ಈ ಕಪ್ಪು ಚುಕ್ಕೆ ಉಂಟಾಗಲು ಈ ಅಧಿಕಾರಿಗಳೇ ಕಾರಣರಾಗಿದ್ದಾರೆ. ಬೇಕಿದ್ದರೆ ಆ ವೇಳೆಯ ಸಿಸಿಟಿವಿ ದೃಶ್ಯಾವಳಿ ಯಾರಾದರೂ ಪರಿಶೀಲಿಸಲಿ. ಈ ಬಗ್ಗೆ ತಾವೆಲ್ಲ ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡುತ್ತಿದ್ದೇವೆ ಎಂದರು. ಜಟ್ಟಿಗಳಾದ ಮಾಧವ ಜಟ್ಟಿ, ಕೃಷ್ಣ ಜಟ್ಟಿ, ಬಲರಾಂ ಜಟ್ಟಿ ಇದ್ದರು.

ದಸರಾದಲ್ಲಿ ಸಚಿವ ಯತೀಂದ್ರ ಕಡೆಗಣನೆ

ದಲಿತ ಸಚಿವರಿಗೆ ಅವಮಾನ ಆರೋಪ | ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಸೇರಿದಂತೆ ವಿವಿಧ ಸಂಘಟನೆಯಿಂದ ಪ್ರತಿಭಟನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ದಸರಾ ಮಹೋತ್ಸವದಲ್ಲಿ ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರನ್ನು ಕಡೆಗಣಿಸಲಾಗಿದೆ ಮತ್ತು ದಲಿತ ಸಚಿವರನ್ನು ಅವಮಾನಿಸಲಾಗಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತವೇದಿಕೆಸೇರಿದಂತೆವಿವಿಧಸಂಘಟನೆಯವರು ನಗರದ ರಾಮಸ್ವಾಮಿ ವೃತ್ತದಲ್ಲಿ ಗುರುವಾರ ಪ್ರತಿಭಟಿಸಿದರು.

ಸರ್ಕಾರದ ಜಾಹೀರಾತಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಭಾವಚಿತ್ರವನ್ನುಕೈ ಬಿಟ್ಟವರು ಯಾರು ಬಹಿರಂಗಪಡಿಸಬೇಕು. ದಸರಾವನ್ನು ಸರ್ವರನ್ನು ಒಳಗೊಂಡಂತೆ ಆಚರಿಸಿಲ್ಲ ಎಂದು ಜಿಲ್ಲಾಡಳಿತಕ್ಕೆ ಧಿಕ್ಕಾರ ಕೂಗಿದರು. ಅಹಿಂದ ನಾಯಕರಿಗೆ ಅವಮಾನಿಸಲಾಗಿದೆ ಎಂದು ಅವರು ದೂರಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು ಮಾತನಾಡಿ, ದಸರಾದಲ್ಲಿ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರನ್ನು ಕಡೆಗಣಿಸಲಾಗಿದೆ. ಅನೇಕ ಲೋಪದೋಷಗಳಿಂದ ಅವ್ಯವಸ್ಥೆಯಾ ಗಿದೆ. ಶಿಷ್ಟಾಚಾರ ಉಲ್ಲಂಘಿಸಲಾಗಿದೆ ಎಂದು ಕಿಡಿಕಾರಿದರು.

ಡಾ. ಯತೀಂದ್ರ ಅವರನ್ನು ಜಾಹೀರಾತಿನಲ್ಲಿ ಭಾವ ಚಿತ್ರ ಹಾಕದಿರುವುದು ಅವರ ಬೆಂಬಲಿಗರಿಗೆ ಅಪಾರ ನೋವುಂಟು ಮಾಡಿದೆ. ಉಸ್ತುವಾರಿ ಸಚಿವರನ್ನು ಅವಮಾನಿಸುವ ಹುನ್ನಾರ ನಡೆದಿದೆ. ಈ ಬಗ್ಗೆಮುಖ್ಯಮಂತ್ರಿಗಳು ಜವಾಬ್ದಾರಿತೆಗೆದುಕೊಂಡು ಕ್ರಮ ತೆಗೆದುಕೊಳ್ಳಬೇಕು. ಸಮಗ್ರ ತನಿಖೆ ನಡೆಸಬೇಕು ಎಂದು ಅವರು ಒತ್ತಾಯಿಸಿದರು.

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್. ಭಾಸ್ಕರ್‌ಮಾತನಾಡಿ, ದಸರಾ ಜಂಬೂಸವಾರಿಯಲ್ಲಿ ಸಚಿವರಾದ ಪಿ.ಎಂ. ನರೇಂದ್ರಸ್ವಾಮಿ, ಶಿವರಾಜ್ ಎಸ್ ತಂಗಡಗಿ, ಕೆ.ಎಸ್. ಬಸವಂತಪ್ಪ ಅವರನ್ನು ಅವಮಾನಿಸಿರುವುದು ಆಕ್ಷಮ್ಯ ಎಂದು ಖಂಡಿಸಿದರು. ಪಾಸ್ ಇದ್ದವರಿಗೂ ಅರಮನೆ ಒಳಗಡೆ ಪ್ರವೇಶ ಸಿಗಲಿಲ್ಲ, ಗೋಲ್ಡ್ ಕಾರ್ಡ್ ಇದ್ದವರಿಗೂ ಸರಿಯಾದ ಆಸನ ವ್ಯವಸ್ಥೆ ಮಾಡಿರಲಿಲ್ಲ, ಕರ್ತವ್ಯಕ್ಕೆ ಹಾಜರಾದ ಪತ್ರಕರ್ತರನ್ನು ಒಳಬಿಡದೇ ಪ್ರತಿಭಟನೆ ಮಾಡುವಂತಹ ದುಸ್ಥಿತಿ ನಿರ್ಮಾಣವಾಗಿತ್ತು. ಅಧಿಕಾರಿಗಳ ಬೇಜಾವಾಬ್ದಾರಿಯಿಂದ ಎಲ್ಲರೂ ತೊಂದರೆ ಅನುಭವಿಸುವಂತಾಯಿತು ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ವಕೀಲರಾದ ಎ.ಆರ್. ಕಾಂತ ರಾಜು, ತಿಮ್ಮಯ್ಯ, ಮುಖಂಡರಾದ ಯೋಗೇಶ್ ಉಪ್ಪಾರ್, ಡಾ. ನಟರಾಜ್ ಶಿವಣ್ಣ, ಕಲ್ಲಹಳ್ಳಿ ಕುಮಾರ್, ಆರ್ಜುನ ಬೆಳಗುಂದ, ಕಲಿಂ, ರವಿನಂದನ್, ಪ್ರಕಾಶ್, ನಾಗರಾಜು, ಶ್ರೀನಿವಾಸ್, ಲೋಕೇಶ್ ಕುಮಾರ್, ಪುಟ್ಟಸ್ವಾಮಿ, ಮುದ್ದರಾಮೇಗೌಡ ಮೊದಲಾದವರು ಇದ್ದರು.



ಬಸವ ಬೆಳಕು ಕೃತಿ ಮಾನಸಿಕ ನೆಮ್ಮದಿಗೆ ಪೂರಕ

ರಮಾಬಾಯಿನಗರದಲ್ಲಿ ನಡೆದ ಸಮಾರಂಭದಲ್ಲಿ ವಚನ ಕುಮಾರಸ್ವಾಮಿ



• **ಕನ್ನಡಪ್ರಭ ವಾರ್ತೆ** ಮೈಸೂರು

ಮಾನಸಿಕ ನೆಮ್ಮದಿಗೆ ಬಸವ ಬೆಳಕು ಕೃತಿ ಪೂರಕ ಎಂದು ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

ರಮಾಬಾಯಿನಗರದಲ್ಲಿನಡೆದಸಮಾರಂಭದಲ್ಲಿಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಮತ್ತು ರೂಪಾ ಕುಮಾರಸ್ವಾಮಿ ಸಂಪಾದಿಸಿದ ಬಸವ ಬೆಳಕು ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಆಸ್ಪತ್ರೆಗಳು ಜನರಿಗೆಸೂಕ್ತ ಚಿಕಿತ್ಸೆನೀಡಿ ದೈಹಿಕ ಆರೋಗ್ಯ ಕಾಪಾಡುವ ಕಾರ್ಯ ಮಾಡುತ್ತವೆ. ಆದೇ ರೀತಿ ಬಸವ ಬೆಳಕು ಕೃತಿಯು ಬಸವಣ್ಣನವರ ವಿಚಾರ ಧಾರೆ ಹಾಗೂ ವಚನಗಳ ಮೂಲಕ ಮಾನಸಿಕ ನೋವುಗಳಿಗೆ ಸಾಂತ್ವನ ನೀಡಿ, ಮನಸ್ಸಿಗೆನೆಮ್ಮದಿ ಒದಗಿಸುವಕಾರ್ಯ ಮಾಡುತ್ತದೆ. ಬಸವಣ್ಣನವರ ತತ್ವ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಇಂತಹ ಕೃತಿಗಳು ಸಹಕಾರಿಯಾಗಿವೆ ಎಂದರು.

ಉಪನ್ಯಾಸ ನೀಡಿದ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಹನ್ನೆರಡನೇ ಶತಮಾನದಲ್ಲಿಯೇ ವೈದ್ಯಕೀಯ ಸೇವೆಯ ಮಹತ್ವವನ್ನು ಸಾರಿದ ವೈದ್ಯ ಸಂಗಣ್ಣನವರ ವಚನಗಳನ್ನು ಉಲ್ಲೇಖಿಸಿ, ವಚನ ಸಾಹಿತ್ಯವು ಮನುಷ್ಯನ ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಹಾಗೂ ಆಧ್ಯಾತ್ಮಿಕ ಸ್ವಾಸ್ಥ್ಯಕ್ಕೂ ಮಾರ್ಗದರ್ಶನ ನೀಡುತ್ತದೆ ಎಂದರು.

ಫೌಂಡೇಷನ್ ಸಂಸ್ಥಾಪಕಿ ರೂಪಾ ಕುಮಾರಸ್ವಾಮಿ, ಡಾ. ರಾಕೇಶ್, ನೀತು ರಾಕೇಶ್, ಶ್ರೀರಾಂಪುರ ಪಪಂ ಮುಖ್ಯಾಧಿಕಾರಿ ಎ.ಎಂ. ಶ್ರೀಧರ್, ತಾಪಂ ಮಾಜಿ ಸದಸ್ಯ ಶ್ರೀನಿವಾಸ್, ಶ್ರೀರಾಂಪುರ ಗ್ರಾಪಂ ಮಾಜಿ ಅಧ್ಯಕ್ಷ ಶಂಕರ್, ಗ್ರಾಪಂ ಮಾಜಿ ಸದಸ್ಯೆ ಕಮಲಾ ನಟರಾಜ್, ಕಾರ್ಮಿಕ ಸಂಘದ ಜಿಲ್ಲಾಧ್ಯಕ್ಷ ಪಳನ